
ನಾಂದಿಪದ

ಕಲೆ: ಡಾ. ಸಿ. ರವೀಂದ್ರನಾಥ್



# ಕಾವ್ಯ ಮರಳಿ ಬರುತಿದೆ...

ಮನಸ್ಸನ್ನು ಅರಳಿಸುವ ಹಾಗೂ ಮನೋವಿಕಾಸಕ್ಕೆ ಕಾರಣವಾಗುವ ಎಲ್ಲ ಅರ್ಥಪೂರ್ಣ ಸಂಗತಿಗಳೂ ಕಾವ್ಯರೂಪದಲ್ಲಿರುತ್ತವೆ ಇಲ್ಲವೇ ಕಾವ್ಯಕ್ಕೆ ಸಮೀಪವಾಗಲು ತವಕಿಸುತ್ತಿರುತ್ತವೆ. ಹೊಸ ವರ್ಷದ ಮೊದಲ ಸಂಚಿಕೆ ಕಾವ್ಯವನ್ನು ಹಲವು ಬಗೆಗಳಲ್ಲಿ ಆವಾಹಿಸಿಕೊಂಡಿರುವುದಕ್ಕೆ, 'ಮಯೂರ'ದ ಸದಾ ಹೊಸತಾಗುವ ಹಂಬಲವೇ ಕಾರಣವಾಗಿದೆ.

ಬೇಂದ್ರೆಯವರ 'ಸಖೀಗೀತ'ದ ಕುರಿತು ರಾಜೇಂದ್ರ ಚೆನ್ನಿ ಅವರ ಬರಹ, 'ವರಕವಿ'ಯ ಒಟ್ಟು ಕಾವ್ಯದ ಅರ್ಥಸಾಧ್ಯತೆಗಳ ಕುರಿತ ಮಾತುಗಳಾಗಿರುವಂತೆ, ಆ ಕಾವ್ಯದಿಂದ ಕನ್ನಡದ ಬದುಕು ಸಮೃದ್ಧಗೊಂಡಿರುವುದರ ಸೂಚನೆಯೂ ಹೌದು. ಈ ಲೇಖನದ ಆಶಯವನ್ನು ಸಮರ್ಥಿಸುವಂತಿರುವ ಲಂಕೇಶರ ಬರಹ, ಈ ಜಗತ್ತು ಕುರೂಪ ಆಗದಿರಬೇಕಾದರೆ ನಮ್ಮ ಬದುಕು ಬೇಂದ್ರೆ ಅವರಂಥ ಕವಿಗಳ ಕಾವ್ಯ ಮತ್ತು ಕಾಣ್ಕೆಯಿಂದ ಶ್ರೀಮಂತವಾಗಬೇಕು ಎಂದಿರುವುದು ಕಾವ್ಯಪ್ರಯೋಜನಕ್ಕೆ ಎಳೆದಿರುವ ಅಡಿಗೆರೆಯಂತಿದೆ.

ಜನವರಿ 31 ಬೇಂದ್ರೆಯವರ ಜನ್ಮದಿನ. ಈ ದಿನವನ್ನು 'ಕವಿದಿನ' ಎಂದು ಕನ್ನಡ ಸಾಹಿತ್ಯಲೋಕ ಸಂಭ್ರಮಿಸುತ್ತದೆ. 'ಕವಿದಿನ' ಮಾಸದ ಈ ಸಂಚಿಕೆ, ಕಾವ್ಯ ಹಾಗೂ ಕಾವ್ಯಗಂಧಿ–ಕಾವ್ಯಸಂಬಂಧಿ ಬರಹಗಳ ವಿಶಿಷ್ಟ ಸಂಕಲನವಾಗಿದೆ. 'ನಾವು ಕಾವ್ಯವನ್ನಷ್ಟೇ ಸೃಷ್ಟಿಸುವುದಿಲ್ಲ, ಕಾವ್ಯ ನಮ್ಮನ್ನೂ ಸೃಷ್ಟಿಸುತ್ತದೆ' ಎನ್ನುವ ಅರ್ಜೆಂಟೀನಾದ ಕವಿ ಯೊಹೊ ಮೂಹಿಕ ಅವರ ಹೊಳಹು, ಒಂದು ಕವಿತೆ ಮತ್ತೊಬ್ಬ ಕವಿಯೊಳಗೆ ಹೊಸಹುಟ್ಟು ಪಡೆಯುವ ಕಾವ್ಯವೈಚಿತ್ರ್ಯದ ಕುರಿತ ಶಿವರಾಜ ಬೆಟ್ಟದೂರು ಅವರ ಬರಹ – ಎಲ್ಲವೂ ಕಾವ್ಯ ಕುತೂಹಲವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ಬದುಕಿಗೆ ಕಾವ್ಯ ಯಾಕೆ ಬೇಕು ಎನ್ನುವುದನ್ನೂ ಆಪ್ತವಾಗಿ ಮನವರಿಕೆ ಮಾಡಿಕೊಡುವ ಪ್ರಯತ್ನಗಳಾಗಿವೆ.

ಕಳೆದ ನಾಲ್ಕು ಸಂಚಿಕೆಗಳಿಂದ ಪ್ರಕಟಗೊಳ್ಳುತ್ತಿದ್ದ 'ಕಾವ್ಯಜೂಟಾಟ' ಮಾಲಿಕೆ ಈ ಸಂಚಿಕೆಯಲ್ಲಿ ಕೊನೆಗೊಂಡಿದೆ. ಸಂಚಿಕೆಯಲ್ಲಿನ ಕವಿತೆಗಳು ಹಾಗೂ ಕಥೆಗಳು ಕನ್ನಡದ ಈ ಹೊತ್ತಿನ ಸುಗ್ಗಿಯ ಆಯ್ದ ಕೊಯಿಲುಗಳಂತಿವೆ. ಈ ಸಂಚಿಕೆಯಿಂದ ಆರಂಭಗೊಂಡಿರುವ, ಕಲೀಮ್ ಉಲ್ಲಾ ಅವರ ಅಂಕಣ 'ಕಾಡಿಗೆ ಕಣ್ಣು', ಕಾವ್ಯದ ಕಣ್ಣೂ ಹೌದು. ವೈವಿಧ್ಯ ಹಾಗೂ ಸಮೃದ್ಧ – ಎರಡರ ಮಿಳಿತದ 2023ರ ಮೊದಲ ಫಲ ನಿಮಗೆ ಇಷ್ಟವಾಗುವುದೆನ್ನುವುದು ನಮ್ಮ ನಂಬಿಕೆ.

**ಮಯೂರ ಬಳಗ**

editormy@mayura.co.in